ಅ.ದಾ.39/2021     ಡಿಡಬ್ಲ್ಯೂ-1

ದಿನಾಂಕಃ 23.06.2026 ರಂದು ಸಾಕ್ಷಿದಾರರಿಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಜೆ. ವಕೀಲರಿಂದ:**

1. ನೀವು ಮತ್ತು ವಾದಿಗಳು ಸೇರಿ ಜಮೀನುಗಳನ್ನು ಅಳತೆ ಮಾಡಿಸಿಕೊಳ್ಳಲು ತೊಂದರೆ ಇದೆಯಾ ಎಂದರೆ? ನಾವು ಮಾಡಿಸಿದ್ದೇವೆ, ಅವರು ಬೇಕಾದರೆ ಮಾಡಿಸಿಕೊಳ್ಳಲಿ ಎಂದು ನುಡಿಯುತ್ತಾರೆ.

2. ವಾದಿಯು ಸಹಾ ದಿ.01.10.2024 ರಂದು ವಾದಿಯವರು ಅಳತೆ ಮಾಡಿಸಿರುತ್ತಾರೆ ಎಂದರೆ? ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ನಿಪಿ-5 ರಲ್ಲಿ ನೀವು 2¾ ಒತ್ತುವರಿ ಬಗ್ಗೆ ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೇಗೆ ನಿಮಗೆ ನೋಟೀಸು ನೀಡಿದರೂ ಸಹಾ ನೀವು ಉದ್ದೇಶಪೂರ್ವಕವಾಗಿ ಹಾಜರಾಗಿಲ್ಲ ಎಂದರೆ ಸರಿಯಲ್ಲ.

3. ನೀವು ಖರೀದಿ ಮಾಡಿದ ನಂತರ ಸದರಿ 2¾ ಒತ್ತುವರಿ ಮಾಡಿದ್ದೀರ ಎಂದರೆ ಸರಿಯಲ್ಲ. ನೀವು ಉದ್ದೇಶಪೂರ್ವಕವಾಗಿ 1 ನೇ ಪ್ರತಿವಾದಿಯನ್ನು ನ್ಯಾಯಾಲಯದ ಮುಂದೆ ಹಾಜರಾಗುವುದನ್ನು ತಪ್ಪಿಸುತ್ತಿದ್ದೀರ ಎಂದರೆ ಸರಿಯಲ್ಲ.

4. ಅವರ ಪರವಾಗಿ ಸಾಕ್ಷಿ ಹೇಳಲು ನಿಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

5. ನೀವು ಉದ್ದೇಶ ಪೂರ್ವಕವಾಗಿ ವಾದಿಯವರ ದಾವ ಸ್ವತ್ತಿನ ಅನುಭೋಗಕ್ಕೆ ತೊಂದರೆ ನೀಡುತ್ತಿದ್ದೀರ ಎಂದರೆ ಸರಿಯಲ್ಲ.

6. ಈ ದಾವ ಚಾಲ್ತಿಯಲ್ಲಿದ್ದಾಗ ನೀವು ಒತ್ತುವರಿ ಮಾಡಿದ್ದರಿಂದ, ಸದರಿ ಜಾಗವನ್ನು ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನೀವು ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೀರ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.